ಒ.ಎಸ್. ನಂ.86/2022
ಪಿಡಬ್ಲು-1

ದಿನಾಂಕ 23.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನನ್ನ ಮಕ್ಕಳು ನೋಡದ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ. ನನ್ನ ಮದುವೆ ಶ್ರೀಮಂತನೊಂದಿಗೆ 57-58 ವರ್ಷಗಳಾಗಿರಬಹುದು ಎಂದರೆ ಆಗಿರಬಹುದು ಎಂದು ಹೇಳುತ್ತಾರೆ. ಶ್ರೀಮಂತನ ಮೊದಲನೆ ಹೆಂಡತಿ ಸೂಗಮ್ಮ ಮೃತಪಟ್ಟು 55-ವರ್ಷಗಳಾಗಿರಬಹುದು ಎಂದರೆ ಸರಿ. ಸರ್ವೆ ನಂ.78 ಮತ್ತು 86 ನನ್ನ ಗಂಡನಿಗಿಂತ ಮೊದಲು ಯಾರ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.78 ಮತ್ತು 86 ಒಂದುಕ್ಕೊಂದು ಹೊಂದಿಕೊಂಡು ಇವೆ ಎಂದರೆ ಸರಿ. 2ನೆ ಪ್ರತಿವಾದಿಯ ಹೆಸರಿಗೆ 02-ಎಕರೆ ಜಮೀನು ಇರುತ್ತದೆ ಎಂದರೆ ಇರಬಹುದು. 1ನೆ ಪ್ರತಿವಾದಿಯ ಹೆಸರಿಗೆ 01-ಎಕರೆ 02-ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. 3ನೆ ಪ್ರತಿವಾದಿಯ ಹೆಸರಿಗೆ 02-ಎಕರೆ 05-ಗುಂಟೆ ಜಮೀನು ಇದೆ ಎಂದರೆ ಸಾಕ್ಷಿ ಅವರ ಹೆಸರಿಗೆ ಮಾಡಿಕೊಂಡಿರಬಹುದು ಎಂದು ಹೇಳುತ್ತಾರೆ. 1 ರಿಂದ 3ನೆ ಪ್ರತಿವಾದಿಯರು 20-ವರ್ಷಗಳ ಹಿಂದೆ ದಾವಾಸ್ತಿಗಳನ್ನು ಪಾಲು ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2ನೆ ಪ್ರತಿವಾದಿ ದಾವಾಸ್ತಿಗಳಲ್ಲಿ 02-ಎಕರೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೆ ಪ್ರತಿವಾದಿ 01-ಎಕರೆ 05-ಗುಂಟೆ ಮತ್ತು 3ನೆ ಪ್ರತಿವಾದಿ 02-ಎಕರೆ 05-ಗುಂಟೆ ಜಮೀನನ್ನು ಸಾಗುವಳಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1ನೆ ಪ್ರತಿವಾದಿಯ ಹಸರಿಗೆ ಕಲಬುರಗಿಯಲ್ಲಿ ಮನೆ ಇದೆ ಎಂದರೆ ಸರಿ, ಸದರಿ ಮನೆಯನ್ನು ಆತನೆ ಖರೀದಿ ಮಾಡಿರುತ್ತಾನೆ ಎಂದು ಹೇಳುತ್ತಾರೆ. ಸದರಿ ಮನೆಯನ್ನು ಗುಂಡಪ್ಪ, 1 ಮತ್ತು 2ನೆ ಪ್ರತಿವಾದಿಯರು ಸೇರಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಖರೀದಿ ಮಾಡಿ 20-25 ವರ್ಷಗಳಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗನಿಗೆ ಸರಕಾರಿ ನೌಕರಿಯಾಗಿ 15-ವರ್ಷಗಳಾಗಿರುತ್ತದೆ ಎಂದರೆ ಸರಿ.

ಈಗಾಗಲೇ 1 ಮತ್ತು 2ನೆ ಪ್ರತಿವಾದಿಯರ ಹಾಗೂ ಗುಂಡಪ್ಪನ ನಡುವೆ ಪಾಲು ಆಗಿದ್ದು 1ನೆ ಪ್ರತಿವಾದಿಯ ಮಾತು ಕೇಳಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಶ್ರೀಮಂತ ಎರಡನೆ ಹೆಂಡತಿ ಆಗಿರುವುದರಿಂದ ನನಗೆ ದಾವಾಸ್ತಿಗಳಲ್ಲಿ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ